ದಿ: 28.11.2025 ರಂದು ಫಿರ್ಯಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಂದುವರೆದ ಪಾಟೀ ಸವಾಲು**</u>: ಆರೋಪಿ ಪರ ಶ್ರೀಯುತ ಸಿ.ಕೆ.ಹೆಚ್. ವಕೀಲರಿಂದ.

5. ನೀವು ಈ ಹಿಂದೆ ಪಾಟೀ ಸವಾಲಿನಲ್ಲಿ ಹೇಳಿರುವಂತೆ ಸೆಕೆಂಡ್ ಹ್ಯಾಂಡ್ ಮರದ ವ್ಯಾಪಾರವನ್ನು ಮಾಡುತ್ತಿದ್ದೆ ಎನ್ನುವ ಕುರಿತು ಸೆಕೆಂಡ್ ಹ್ಯಾಂಡ್ ಮರವನ್ನು ಎಲ್ಲಿಂದ ತರುತ್ತಿದ್ದೀರಿ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೆಲವು ಮನೆಯವರು ತಮ್ಮ ಮನೆಯ ಹಳೆಯ ಮರವನ್ನು ಮಾರುವುದಾಗಿ ಹೇಳುತ್ತಿದ್ದ ಮೇರೆಗೆ ಅಲ್ಲಿಂದ ಖರೀದಿಸಿ ತರುತ್ತಿದ್ದೆ ಎಂದು ನುಡಿಯುತ್ತಾರೆ. ಆ ರೀತಿ ಸೆಕೆಂಡ್ ಹ್ಯಾಂಡ್ ಮರದ ವ್ಯಾಪಾರವನ್ನು ಮಾಡುತ್ತಿದ್ದೆ ಎನ್ನುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ನಾನು ಸೆಕೆಂಡ್ ಹ್ಯಾಂಡ್ ಮರದ ವ್ಯಾಪಾರವನ್ನು ಮಾಡುತ್ತಿದ್ದೆ ಎನ್ನುವ ವಿಚಾರವನ್ನು ನನ್ನ ನೋಟೀಸು ಮತ್ತು ಫಿರ್ಯಾದಿನಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ನಾನು ಯಾವುದೇ ಮರದ ವ್ಯಾಪಾರ ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ.

6. ನಾನು ನನ್ನ ಫಿರ್ಯಾದಿನಲ್ಲಿ ಹಣವನ್ನು ನನ್ನ ಮಗಳಿನಿಂದ ಪಡೆದುಕೊಂಡು ಬಂದು ನೀಡಿರುತ್ತೇನೆ ಎಂದರೆ ಸರಿ. ಆ ರೀತಿ 2014 ನೇ ಸಾಲಿನಲ್ಲಿ ನನ್ನ ಮಗಳಿನಿಂದ ಹಣವನ್ನು ಪಡೆದುಕೊಂಡು ಬಂದಿರುತ್ತೇನೆ. ಆ ರೀತಿ ನಾನು ನನ್ನ ಮಗಳಿನಿಂದ ಯಾವುದೇ ಹಣ ಪಡೆದುಕೊಂಡು ಬಂದು ಆರೋಪಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಮಗಳನ್ನು ನಿಮ್ಮ ಪರವಾಗಿ ಸಾಕ್ಷ್ಯ ಮಾಡಿಸುತ್ತೀರಾ ಎಂದರೆ ಸಾಕ್ಷಿಯು ಸಾಕ್ಷಿ ಮಾಡಿಸುತ್ತೇನೆ ಎಂದು ನುಡಿಯುತ್ತಾರೆ.

7. ನಿಪಿ.೧ ಮತ್ತು ೨ ರಲ್ಲಿರುವ ಬರವಣಿಗೆಗಳನ್ನು ಯಾರು ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿಯೇ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.೧ ಮತ್ತು ೨ ರಲ್ಲಿರುವ ಬರವಣಿಗೆಗಳನ್ನು ಆರೋಪಿಯೇ ಬರೆದು ನೀಡಿರುತ್ತಾರೆ. ನಿಪಿ.1 ಮತ್ತು 2 ರಲ್ಲಿರುವ ಆರೋಪಿಯ ಸಹಿಗಳನ್ನು ಆರೋಪಿಯೇ ಬರೆದು ನೀಡಿರುತ್ತಾರೆ. ಆರೋಪಿಯು ನಿಮ್ಮ ಬಳಿ ಎರಡು ಲಕ್ಷ ಹಣ ಪಡೆದುಕೊಂಡಿದ್ದರೆ ಮರುಪಾವತಿಯ ಕುರಿತು ಕೇವಲ ಒಂದು ಚೆಕ್ಕನ್ನು ನೀಡುತ್ತಿದ್ದರು ಮತ್ತು ಎರಡು ಚೆಕ್ಕು ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಿಯೋ ಸಿಕ್ಕಿರುವ ಚೆಕ್ಕುಗಳ ಮೇಲೆ ಸ್ವತ: ಬರೆದು ಬ್ಯಾಂಕಿಗೆ ಹಾಜರುಪಡಿಸಿ ಅಮಾನ್ಯಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ಚೆಕ್ಕಿನ ಬ್ಯಾಂಕ್ ಖಾತೆಯಲ್ಲಿ ಆರೋಪಿಯು ಪ್ರತಿನಿಧಿ ಒಂದು ಆಗಿರುತ್ತಾರೆ ಮತ್ತು ನಿಪಿ.2 ಚೆಕ್ಕು ಆರೋಪಿಗೆ ಸಂಬಂಧಿಸಿದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

8. ನಾನು ವಕೀಲರ ಮೂಲಕ ಆರೋಪಿಗೆ ನೀಡಿದ ನೋಟೀಸು ಜಾರಿಯಾದ ಕುರಿತು ಯಾವುದೇ ಅಂಚೆ ಸ್ವಿಕೃತಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಏಪ್ರಿಲ್ ಮಾಹೆಯಲ್ಲಿ ಹಣ ನೀಡಿರುತ್ತೇನೆ. ಆ ರೀತಿ ನಾನು ಆರೋಪಿಗೆ ಹಣ ನೀಡುವ ಸಮಯದಲ್ಲಿ ನನ್ನ ಮಾವ ಚಂದ್ರಮೌಳಿ ಹಾಜರಿದ್ದರು. ಆರೋಪಿಯು ನನ್ನ ಬಳಿ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಮತ್ತು ಆ ಕುರಿತು ಆರೋಪಿಯು ನನಗೆ ಯಾವುದೇ ಚೆಕ್ಕುಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಚೆಕ್ಕು ಸಂಘಕ್ಕೆ ಸಂಬಂಧಿಸಿದ ಚೆಕ್ಕು ಆದ ಮೇರೆಗೆ ಸದರಿ ಚೆಕ್ಕಿಗೆ ಇಬ್ಬರು ಪ್ರತಿನಿಧಿಗಳು ಸಹಿ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ.1 ಚೆಕ್ಕಿನ ಸಂಘವನ್ನು ಪಕ್ಷಗಾರರಾಗಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಚೆಕ್ಕು ಸಂಘಕ್ಕೆ ಸೇರಿದ ಚೆಕ್ಕು ಆದ ಮೇರೆಗೆ ಆರೋಪಿಯು ನಿಪಿ.1 ಚೆಕ್ಕನ್ನು

ಸ್ವಂತ ಉಪಯೋಗಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.